ಮನೆಯ ಮಣಕು ಹಾಸಿಗೆಯ ಮೇಲೊ ಆಸ್ಪತ್ರೆಯ ವಾರ್ಡಿನಲ್ಲೊ ಹೋಗುವ ಜೀವ, ಚಲಿಸುವ ವಾಹನದಲ್ಲಿ ಹೋದರೆ ಒಳಿತೇ ಆಯಿತು ಪಯಣದಲ್ಲಿ ಪಯಣ. 'ಜಂಗಮಕ್ಕಳಿವಿಲ್ಲ' ಎಂದು ಶರಣರು ಹೇಳಿದ್ದಾರಷ್ಟೆ. 'ಇರುವುದೆಲ್ಲವ ಬಿಟ್ಟು ಇರದುದೆಡೆಗೆ ತುಡಿಯುವುದೇ ಜೀವನ.' ಕುತೂಹಲದಿಂದ ಪಯಣದಲ್ಲಿ ಗತಿಸಿದವರ ಪಟ್ಟಿತೆಗೆದು ನೋಡಿದೆ. ದೊಡ್ಡ ಹಸ್ತಿಗಳೇ ಇದ್ದವು. ಖುಶಿಯಾಯಿತು. ಆನೆಗಳ ಹಾದಿಯಲ್ಲಿ ಆಡುಕುರಿ ಹೋಗಬಾರದು ಎಂದು ಎಲ್ಲಿದೆ ಕಾನೂನು?

ಊರಾಟ ಮಾಡುವವರಿಗೆ ಜನ 'ಪಾಪ! ಅವರ ಕಾಲಲ್ಲಿ ಚಕ್ರವಿದೆ. ಅವರಾದರೂ ಏನು ಮಾಡಿಯಾರು' ಎಂದು ಅನುಕಂಪಿಸುವರು. ಮೂಢನಂಬಿಕೆ ವಿರೋಧಿಯಾದ ನಾನು ಈ ನಂಬಿಕೆಯನ್ನು ಗುಟ್ಟಾಗಿ ಬೆಂಬಲಿಸುತ್ತೇನೆ. ನನಗೆ ವೃತ್ತಿಗಾಗಿ ತಿರುಗಾಟ ಅನಿವಾರ್ಯ. ಮಧುಕರಿಯಂತೆ ತಿರಿದು ಉಂಡಲ್ಲದೆ ನಿದ್ದೆಹತ್ತದು. ಇಷ್ಟಾಗಿ ತಿರುಗುವ ಹವ್ಯಾಸ ಬಾಲ್ಯದಿಂದಲೇ ಅಡರುತ್ತದೆಯೆಂದು ಕಾಣುತ್ತದೆ. ಸಣ್ಣವನಿದ್ದಾಗ ಯಾರಾದರೂ ಊರಿಗೆ ಹೊರಟರೆ ನಾನೂ ಬರುತ್ತೇನೆಂದು ಗಂಟುಬೀಳುತ್ತಿದ್ದೆ; ತಪ್ಪಿಸಿಹೋದಾರೆಂದು ಬಸ್ಸಿನ ಗೇಟಿಗೆ ಮೊದಲೇ ಉಟ್ಟಬಟ್ಟೆಯಲ್ಲಿ ಹೋಗಿ ಕೂರುತ್ತಿದ್ದೆ. ಈಗಲೂ 'ಎದ್ದೇನೊ ದಾಸಪ್ಪ ಅಂದರೆ ಹೆಗಲಮೇಲೆ ಕಂಬಳಿ' ಕಾಯಿಲೆ ನನ್ನಿಂದ ಹೋಗಿಲ್ಲ. ಹೋಗುವುದೂ ಬೇಡ. ಪಯಣದ ಬೀದಿದೂಳಿಗೆ ಅರಳುವ ಹೂ ಮುಡಿವುದು ನನಗೆ ಸದಾ ಇಷ್ಟ; ಹೊಸತಾಣಗಳಿಗೆ ಹೋಗುವುದು, ಅಲ್ಲಿನ ಜನ, ಬಾಳು, ಪ್ರಕೃತಿ ನೋಡುವುದು ಮುದಕೊಡುತ್ತದೆ. ನೆರಳಲ್ಲೇ ಇದ್ದು ಕುಬ್ಜಗೊಂಡ ಗಿಡ ಬಿಸಿಲನ್ನು ಬಯಸುವುದು ಸಹಜ. ಲೋಕದ ಚೇಷ್ಟೆಗೆ ರವಿ ಬೀಜವೆಂದಳು ಮಹಾದೇವಿಯಕ್ಕ; ನನ್ನಂಥವರ ಬಾಳಚೇಷ್ಟೆಯಲ್ಲಿ ಪಯಣವೇ ಬೀಜ; ಪಯಣದ ತುದಿಗೆ ಸಿಗುವ ಅನುಭವಕ್ಕಿಂತ ನಡುವೆ ಸಿಗುವ ಅನುಭವಗಳೇ ಚೆಂದ. ಕಡಲಾಳಕ್ಕಿಳಿದು ಮುತ್ತು ತರುವ ಧೀರರಿದ್ದಾರು. ದಡದ ಉಸುಕಿನಲ್ಲಿ ನಡೆಯುತ್ತ ಕಪ್ಪೆಚಿಪ್ಪು ಹೆಕ್ಕುವುದು ನನಗೆ ಸಾಕು. ಪಯಣವೊಂದು ಚಲಿಸುವ ರಂಗಭೂಮಿ. ಅಲ್ಲಿ ನರಮಾನವರ ಸಣ್ಣತನ ಉದಾರತೆ ನೋವು ಪ್ರೀತಿ ತಮಾಷೆ ಪ್ರದರ್ಶನಗೊಳ್ಳುತ್ತವೆ. ಹಸಿದ ಸಿಂಹ ಬೇಟೆಯಾಡಲು ಚೂರೂ ಇಷ್ಟವಿಲ್ಲವೆಂಬ ಅನಾಸ್ಥೆಯಿಂದ ಬಲಿಪಶುಗಳನ್ನು ಹೊಂಚುವಂತೆ ನಾನವನ್ನು ಗಮನಿಸುವೆ. ಯಾವ ಜನ್ಮದಲ್ಲಿ ಸಿಂದಾಬಾದನ ಶಾಪಗ್ರಸ್ತ ಕೂಲಿಯಾಳಾಗಿದ್ದೆನೊ? ಈ ಬಾಗ್ದಾದಿನ ವಣಿಕ ಪಡಬಾರದ ಪಾಡುಪಟ್ಟು ನೌಕಾಯಾನದಿಂದ ಬಂದು ಮನೆಗೆ ಬೀಳುತ್ತಿದ್ದನು. ಕಂಡದ್ದನ್ನು ಕತೆಮಾಡಿ ಊರಮಂದಿಗೆಲ್ಲ ಹೇಳುತ್ತಿದ್ದನು. ಅನುಭವದ ಸರಕು ಖಾಲಿಯಾಯಿತೊ, ನೌಕೆಹತ್ತಲು ಅವನ ಕಾಲು ತುರಿಸುತ್ತಿದ್ದವು. ಅಲೆಗಳು ಕೈಬೀಸಿ ಕರೆಯುತ್ತಿದ್ದವು. ಪಯಣದ ಸುಳಿಗೆ ಸಿಕ್ಕವರು ಹೊರಬಂದಿದ್ದು ಕಡಿಮೆ.

ಮನೆಯಿಂದ ದೂರ ಒಯ್ಯುವ ರೈಲು ಬಸ್ಸು ಹಡಗು ವಿಮಾನಗಳು ನನ್ನೊಳಗೆ ವಿಚಿತ್ರ ಸಂಚಲನ ಹುಟ್ಟಿಸುತ್ತವೆ. ಚಕ್ರವನ್ನು ಲೀಲೆಯಿಂದ ತಿರುಗಿಸುತ್ತ ವಾಹನ ನಡೆಸುವ ಚಾಲಕರು ಬಾಲ್ಯದಲ್ಲಿ ನಮ್ಮ ಪಾಲಿಗೆ ಲೋಕದ ಸರ್ವಶಕ್ತರು. ಬಸ್ಸಿನಲ್ಲಿ ಡ್ರೈವರ್ ಸೀಟಿನ ಆಸುಪಾಸಿನಲ್ಲೇ ಜಾಗ ಹುಡುಕಿಕೊಳ್ಳುತ್ತಿದ್ದೆವು. ಅವರ ಪೋಷಾಕಾದರೂ ಎಷ್ಟು ಆಕರ್ಷಣೀಯ? ಕೆಂಬಸ್ಸಿನ ಚಾಲಕರು, ಎದೆಬಿಲ್ಲೆ ಸಿಕ್ಕಿಸಿಕೊಂಡು, ಪೊಲೀಸ್ ಇನ್‌ಸ್ಪೆಕ್ಟರಂತೆ ಸೊಂಟಕ್ಕೆ ಕೆಂದೊಗಲ ನಡುಪಟ್ಟಿ, ತಲೆಗೆ ಹ್ಯಾಟು ಧರಿಸಿ ಠಾಕುಠೀಕಾಗಿರುತ್ತಿದ್ದರು; ನಮ್ಮೂರಿನಿಂದ ಹೊರಡುತ್ತಿದ್ದ ಫಸ್ಟ್‌ಬಸ್ 'ಸಿದ್ಧರಾಮೇಶ್ವರ'ದ ಡ್ರೈವರಂತೂ, ನೊಸಲಿಗೆ ವಿಭೂತಿಯೆಳೆದು, ಭ್ರೂಮಧ್ಯದಲ್ಲಿ ಕುಂಕುಮವಿಟ್ಟು, ಕಿವಿಗೆ ಹೂಮುಡಿದು, ಹರಳೆಣ್ಣೆಯಲ್ಲಿ ನೆನೆದ ಕೂದಲನ್ನು ಹಿಂದಕ್ಕೆ ಹೆಕ್ಕಿ, ಸ್ಟೇರಿಂಗ್ ಮೇಲಿನ ದೇವರಪಟಕ್ಕೆ ಹೂಮಾಲೆ ಹಾಕಿ, ಊದುಬತ್ತಿ ಬೆಳಗಿ ಸಾಕ್ಷಾತ್